ಅ) 1989–90 ಮತ್ತು 1990–91ನೇ ಸಾಲುಗಳಲ್ಲಿ ಧಾರವಾಡ ಜಿಲ್ಲೆಯಲ್ಲಿರುವ ವಕ್ಫ್ ಮಂಡಳಿಗೆ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಣದ ಮೊತ್ತವೆಷ್ಟು;

ಆ) ಈ ವಕ್ಫ್ ಮಂಡಳಿಯವರು ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿಗೆ ಎಷ್ಟು ಹಣವನ್ನು ನೀಡಿದ್ದಾರೆ;

ಇ) ಕಳೆದ 2 ವರ್ಷಗಳಿಂದ ಧಾರವಾಡ ಜಿಲ್ಲೆಯಲ್ಲಿರುವ ಉರ್ದು ಶಾಲೆಗಳ ವಿದ್ಯಾರ್ಥಿ ನಿಲಯಗಳಿಗೆ ವಕ್ಫ್ ಮಂಡಳಿಯವರು ಎಷ್ಟೆಷ್ಟು ಹಣವನ್ನು ನೀಡಿದ್ದಾರೆ (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :–

ಅ) 1989–90 ರೂ. 2,25,000

1990–91ನೇ ಸಾಲಿನಲ್ಲಿ ಸರ್ಕಾರದಿಂದ ಇನ್ನೂ ಯಾವ ಸಂಸ್ಥೆಗೂ ಅನುದಾನ ಬಿಡುಗಡೆಯಾಗಿಲ್ಲ.

ಆ) 1989–90ನೇ ಸಾಲಿನಲ್ಲಿ

	ತಾಲ್ಲೂಕುಗಳು	ರೂ. ಗಳು
1)	ಶಿಗ್ಗಾಂವ	30,000
2)	ಧಾರವಾಡ	1,50,000
3)	ಹಿರೇಕೆರೂರು	25,000
4)	ರೋಣ	20,000
	ಒಟ್ಟು ಮೊತ್ತ ರೂ.	2,25,000

1990–91ನೇ ಸಾಲಿಗೆ ಈವರೆಗೆ ಯಾವ ಸಂಸ್ಥೆಗೂ ಅನುದಾನವನ್ನು ಮಂಜೂರು ಮಾಡಿಲ್ಲ.

ಇ) ಆರ್ಥಿಕ ಮುಗ್ಗಟ್ಟಿನಿಂದಾಗಿ ಉರ್ದು ಶಾಲೆಗಳ ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯಗಳಿಗೆ 1989–90ನೇ ಸಾಲಿನಲ್ಲಿ ಹಣವನ್ನು ಮಂಜೂರು ಮಾಡಿಲ್ಲ.

1990–91ನೇ ಸಾಲಿಗಾಗಿ ಈವರೆಗೆ ಯಾವ ಸಂಸ್ಥೆಗೂ ಅನುದಾನವನ್ನು ಬಿಡುಗಡೆ ಮಾಡಿಲ್ಲ.

ಬರಗಾಲ ತಾಲ್ಲೂಕುಗಳು ಹಾಗೂ ಅಭಾವ ಕಾಮಗಾರಿ ಬಗ್ಗೆ

(533) ಶ್ರೀ ಎಲ್.ಆರ್. ಶಿವರಾಮೇ ಗೌಡ (ನಾಗಮಂಗಲ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈವರೆಗೆ ಮಳೆ ಸಮರ್ಪಕವಾಗಿ ಆಗಿರದೆ ಬರಗಾಲದ ಕ್ಷಾಮಯಿರುವ ಎಷ್ಟು ತಾಲ್ಲೂಕುಗಳನ್ನು ಗುರುತಿಸಲಾಗಿದೆ?

ಆ) ಈ ತಾಲ್ಲೂಕುಗಳಲ್ಲಿ "ಅಭಾವ ಪರಿಹಾರ ಕಾರ್ಯ" ಗಳಿಗೆ ಈವರೆಗೆ ಎಷ್ಟು ಖರ್ಚು ಮಾಡಲಾಗಿದೆ?

ಇ) ಮೇಲ್ಕಂಡ ತಾಲ್ಲೂಕುಗಳಲ್ಲಿ ಜಾನುವಾರು ಮೇವುಗಳಿಗಾಗಿ ಕುಡಿಯುವ ನೀರು, ಕೃಷಿ ಕಾರ್ಮಿಕರಿಗೆ ಕೆಲಸ ನೀಡುವ ಬಗ್ಗೆ ಸರ್ಕಾರ ಮಾಡಿರುವ ಆದ್ಯತೆಯ ವ್ಯವಸ್ಥೆಗಳೇನು?

ಈ) ನಾಗಮಂಗಲ ತಾಲ್ಲೂಕಿಗೆ ಇದುವರೆಗೆ ಕೈಗೊಂಡಿರುವ ಕಾರ್ಯಕ್ರಮಗಳೇನು? ಈ ಬಗ್ಗೆ ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) ರಾಜ್ಯದಲ್ಲಿ ಕ್ಷಾಮ ಇರುವುದಿಲ್ಲ ಆದರೆ ಭಾಗ: 100 ತಾಲ್ಲೂಕುಗಳಲ್ಲಿ ಸಾಧಾರಣ ಮಳೆಯಿಂದ ಕುಡಿಯುವ ನೀರಿನ ಕೊರತೆ ಹಾಗೂ ಉದ್ಯೋಗಾವಕಾಶದ ಕೊರತೆ ಇದೆ ಎಂದು ಗುರುತಿಸಲಾಗಿದೆ.

ಆ) ರೂ. 12.00 ಕೋಟಿಗಳನ್ನು ಬಿಡುಗಡೆ ಮಾಡಿದೆ. ತಾ: 15–10–90 ರವರೆಗೆ ಬಂದಿರುವ ವರದಿಗಳ ಪ್ರಕಾರ ರೂ. 3.01 ಕೋಟಿಗಳನ್ನು ಖರ್ಚು ಮಾಡಲಾಗಿದೆ.

ಇ) ಸಾಮಾನ್ಯ ಯೋಜನೆ ಕಾರ್ಯಕ್ರಮಗಳ ಜೊತೆಗೆ ಹೆಚ್ಚಿನ ಕಾರ್ಯಕ್ರಮಗಳನ್ನು ಆದ್ಯತೆ ಮೇರೆಗೆ ಕೈಗೊಂಡು ಕುಡಿಯುವ ನೀರು ಪೂರೈಕೆ, ಮೇವು ಪೂರೈಕೆ ಮತ್ತು ಉದ್ಯೋಗಾವಕಾಶಗಳನ್ನು ಒದಗಿಸಲು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಹಣವನ್ನು ಬಿಡುಗಡೆ ಮಾಡಿದೆ.

ಈ) ಕುಡಿಯುವ ನೀರು ಪೂರೈಕೆ, ಮೇವು ಪೂರೈಕೆ ಮತ್ತು ಉದ್ಯೋಗ ಸೃಜನೆ ಕಾರ್ಯಕ್ರಮಗಳು. ರೂ. 19.50 ಲಕ್ಷ.

ಭೂ ನ್ಯಾಯ ಮಂಡಳಿ ಮುಂದೆ ಇರುವ ಭೂ ವಿವಾದಗಳ ಬಗ್ಗೆ

534. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಭೂನ್ಯಾಯಮಂಡಳಿಗಳ ಮುಂದಿರುವ ಭೂ ವಿವಾದಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರಗಳು)

ಆ) ಮೇಲ್ಕಂಡ ವಿವಾದಗಳ ಇತ್ಯರ್ಥಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಜಿಲ್ಲಾ ಮೇಲ್ಮನವಿ ಪ್ರಾಧಿಕಾರಗಳ ಮುಂದಿದ್ದ ಪ್ರಕರಣಗಳ ಇತ್ಯರ್ಥದ ಹೊಣೆ ಯಾರಿಗೆ ವಹಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) ಒಟ್ಟು 28,479 ಪ್ರಕರಣಗಳು

ಜಿಲ್ಲಾವಾರು ವಿವರ :

1)	ಬೆಂಗಳೂರು	468
2)	ಬೆಂಗಳೂರು (ಗ್ರಾ)	336
3)	ಚಿತ್ರದುರ್ಗ	249
4)	ಕೋಲಾರ	1395
5)	ಶಿವಮೊಗ್ಗ	1073
6)	ತುಮಕೂರು	246
7)	ಬೆಳಗಾಂ	4288
8)	ಬಿಜಾಪುರ	174
9)	ಧಾರವಾಡ	1351
10)	ಉತ್ತರ ಕನ್ನಡ	741
11)	ಬಳ್ಳಾರಿ	3383
12)	ಬೀದರ್	1852
13)	ಗುಲ್ಬರ್ಗ	396
14)	ರಾಯಚೂರು	257
15)	ಚಿಕ್ಕಮಗಳೂರು	81